ಕರ್ನಾಟಕ ಸರ್ಕಾರ

ಸಂಖ್ಯೆ: ನಅಇ 63 ಟಿಟಿಪಿ 96

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿ ಕಟ್ಟಡ,
ಬೆಂಗಳೂರು ದಿನಾಂಕ 27-1-97.

## ಅ ಧಿ ಸೂ ಚ ನೆ

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯಿದೆ 1961 (1963ರ ಕರ್ನಾಟಕ ಕಾಯಿದೆ ಸಂಖ್ಯೆ 11)ರ 4ಎ ಪ್ರಕರಣದ (1)ನೇ ಉಪಪ್ರಕರಣದ ಅಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸುತ್ತಾ, ಕರ್ನಾಟಕ ಸರ್ಕಾರವು ಅನುಬಂಧ-1 ರಲ್ಲಿ ನಮೂದಿಸಿರುವ ನೆಲಮಂಗಲ ತಾಲ್ಲೂಕಿನ ಎಲ್ಲಾ ಗ್ರಾಮಗಳನ್ನು ಬೆಂಗಳೂರು ಉತ್ತರ ತಾಲ್ಲೂಕಿನ ದಾಸನಪುರ ಹೋಬಳಿ, ಮಾಗಡಿ ತಾಲ್ಲೂಕಿನ ಸೋಲೂರು ಹೋಬಳಿ ಮತ್ತು ಕುದೂರು ಹೋಬಳಿಯಲ್ಲಿನ ಕೆಲವು ಗ್ರಾಮಗಳನ್ನು ಸೇರಿಸಿ ನೆಲಮಂಗಲ ಸ್ಥಳೀಯ ಯೋಜನಾ ಪ್ರದೇಶವನ್ನು ದಿನಾಂಕ 27-1-1997 ರಿಂದ ಜಾರಿಗೆ ಬರುವಂತೆ ಈ ಮೂಲಕ ಘೋಷಿಸಿದೆ.

ಈ ಪ್ರದೇಶವನ್ನು "ನೆಲಮಂಗಲ ಸ್ಥಳೀಯ ಯೋಜನಾ ಪ್ರದೇಶ" ಎಂದು ಕರೆಯಲಾಗಿದೆ ಸದರಿ ಸ್ಥಳೀಯ ಯೋಜನಾ ಪ್ರದೇಶದ ಎಲ್ಲೆಯನ್ನು ಅನುಬಂಧ - 11 ರಲ್ಲಿ ನಮೂದಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

( ಸಿದ್ದರಾಮಯ್ಯ )
ಸರ್ಕಾರದ ಅಧೀನ ಕಾರ್ಯದರ್ಶಿ,
ನಗರಾಭಿವೃದ್ಧಿ ಇಲಾಖೆ.

ಇವರಿಗೆ:-

1) ಕರ್ನಾಟಕ ರಾಜ್ಯಪತ್ರ ಸಂಕಲನಕಾರರು ಮೇಲ್ಕಂಡ ಅಧಿಸೂಚನೆಯನ್ನು ಮತ್ತು ಅನುಬಂಧ-1 ಹಾಗೂ 11 ನ್ನು ಕರ್ನಾಟಕ ರಾಜ್ಯಪತ್ರ ವಿಶೇಷ ಪತ್ರದಲ್ಲಿ ಪ್ರಕಟಿಸಲು ಮತ್ತು (1) ನಿರ್ದೇಶಕರು, ನಗರ ಯೋಜನಾ ಇಲಾಖೆ, ಬೆಂಗಳೂರು ಇವರಿಗೆ 50 ಪ್ರತಿಗಳನ್ನು (2) ನಗರಾಭಿವೃದ್ಧಿ ಇಲಾಖೆ (ಕ.ಪ್ರಾ) ಶಾಖೆಗೆ 50 ಪ್ರತಿಗಳನ್ನು ಒದಗಿಸಲು ಕೋರಲಾಗಿದೆ.

ಪ್ರತಿ:-
1) ವಿಭಾಗಾಧಿಕಾರಿಗಳು ಬೆಂಗಳೂರು ವಿಭಾಗ, ಬೆಂಗಳೂರು.
2) ಜಿಲ್ಲಾಧಿಕಾರಿಗಳು ಬೆಂಗಳೂರು ಗ್ರಾಮಾಂತರ ಬೆಂಗಳೂರು.
3) ನಗರ ಯೋಜನಾ ನಿರ್ದೇಶಕರು, ಬೆಂಗಳೂರು.
4) ಶಾಖಾ ರಕ್ಷಾ ಕಡತ : ಬಿಡಿಪ್ರತಿ.

ಅನುಬಂಧ--2

## ನೆಲಮಂಗಲ ಸ್ಥಳೀಯ ಯೋಜನಾ ಪ್ರದೇಶದ ಎಲ್ಲೆಯ ವಿವರಣೆ

----

ಮೇಲ್ಕಂಡ ಯೋಜನಾ ಪ್ರದೇಶವು ನೆಲಮಂಗಲ ತಾಲ್ಲೂಕಿನ ಎಲ್ಲಾ ಗ್ರಾಮಗಳನ್ನು ಬೆಂಗಳೂರು ಉತ್ತರ ತಾಲ್ಲೂಕಿನ ದಾಸನಪುರ ಹೋಬಳಿ, ಮಾಗಡಿ ತಾಲ್ಲೂಕಿನ ಸೋಲೂರು ಹೋಬಳಿ ಮತ್ತು ಕುದೂರು ಹೋಬಳಿಯಲ್ಲಿನ ಕೆಳಕಂಡ ಗ್ರಾಮಗಳನ್ನು ಒಳಗೊಂಡಂತೆ ನೆಲಮಂಗಲ ಸ್ಥಳೀಯ ಯೋಜನಾ ಪ್ರದೇಶದ ಗಡಿ ವಿವರಣೆ.

ಮೇಲಿನ ಯೋಜನಾ ಪ್ರದೇಶದ ಗಡಿಯು ಬೆಂಗಳೂರು ನಗರ ಜಿಲ್ಲೆ ಗಡಿ ಹಾಗೂ ರಾಷ್ಟ್ರೀಯ ಹೆದ್ದಾರಿ 4 ತುಮಕೂರು ರಸ್ತೆ ಸಂಧಿಸಿದ ಜಾಗದಿಂದ ಪ್ರಾರಂಭವಾಗಿ ನಗರೂರು ಗ್ರಾಮ ವಡ್ಡರಹಳ್ಳಿ, ಮತ್ತಹಳ್ಳಿ, ಹೊಸಹಳ್ಳಿಪಾಳ್ಯ, ಗುಡ್ಡದಹಳ್ಳಿ, ಕುಕ್ಕಲಹಳ್ಳಿ ಗ್ರಾಮಗಳನ್ನು ಆವರಿಸಿಕೊಂಡು ಆ ಗ್ರಾಮಗಳ ಗಡಿಗಳಲ್ಲಿ ಹಾದು ಉತ್ತರದಲ್ಲಿ ನೆಲಮಂಗಲ ತಾಲ್ಲೂಕಿನ ಗಡಿಯಲ್ಲಿ ಹಾದು ಅದರ ಒಳಗೆ ಬರುವ ಎಲ್ಲಾ ಗ್ರಾಮಗಳನ್ನು ಆವರಿಸಿ ಪಶ್ಚಿಮದಲ್ಲಿ ರಾಷ್ಟ್ರೀಯ ಹೆದ್ದಾರಿ 4 ತುಮಕೂರು ರಸ್ತೆಯನ್ನು ಸಂಧಿಸಿ ನೆಲಮಂಗಲ ತಾಲ್ಲೂಕಿನ ಗಡಿಯಲ್ಲಿ ದಕ್ಷಿಣದ ಕಡೆಗೆ ಹಾದು ಗಡಿಯಲ್ಲಿ ಒಳಗೆ ಬರುವ ಎಲ್ಲಾ ಗ್ರಾಮಗಳನ್ನು ಆವರಿಸಿ ಮಾಗಡಿ ತಾಲ್ಲೂಕಿನ ಗಡಿಯನ್ನು ಸಂಧಿಸಿ, ಬೈರಸಂದ್ರ, ಮೈಲನಹಳ್ಳಿ, ಉದ್ದುಕುಂಟೆ, ಕಲ್ಲುಕಟ್ಟೆಪಾಳ್ಯ, ವೀರಾಪುರ, ತಿಮ್ಮಸಂದ್ರ, ಅರಶಿನಕುಂಟೆ, ಆಲದಕಟ್ಟೆ, ತುಬರಪಾಳ್ಯ ಮಡಿಗಂಡನಹಳ್ಳಿ, ಸೋಮದೇವನಹಳ್ಳಿ ಬ್ಯಾಡರಹಳ್ಳಿ, ಉದ್ದನದಹಳ್ಳಿ, ಗುಡಿಮಾರನಹಳ್ಳಿ ಗಂಗೇಶ್ವರಪುರ, ತಿರುಮಲಾಪುರ, ಹೆಮ್ಮನಹಳ್ಳಿ, ಬಸವನಹಳ್ಳಿ, ಗ್ರಾಮಗಳನ್ನು ಆವರಿಸಿ ನೆಲಮಂಗಲ ತಾಲ್ಲೂಕಿನ ಗಡಿಯನ್ನು ಸಂಧಿಸಿ ಕೃಷ್ಣರಾಜಪಾಳ್ಯ, ಬಿದನಪಾಳ್ಯ, ಅವಲಕುಪ್ಪೆ ಹೊಸಹಳ್ಳಿ, ಗೊರವನಹಳ್ಳಿ, ಕನುವನಹಳ್ಳಿ, ಗ್ರಾಮಗಳನ್ನು ಆವರಿಸಿ ಆ ಗ್ರಾಮಗಳ ಗಡಿಗಳನ್ನು ಹಾದು ಬೆಂಗಳೂರು ಉತ್ತರ ತಾಲ್ಲೂಕಿನ ಗಡಿಯನ್ನು ಸಂಧಿಸಿ ನಾಗಸಂದ್ರ, ಮಲ್ಲಸಂದ್ರ ಗಟ್ಟಿಸಿದ್ದನಹಳ್ಳಿ, ಗಿಡ್ಡನಹಳ್ಳಿ, ಕಡಬಗೆರೆ, ಬೆಟ್ಟಹಳ್ಳಿ, ಕಮ್ಮಸಂದ್ರ, ಗಾಡಹಳ್ಳಿ, ಗೆಜ್ಜಗಾನಕುಪ್ಪೆ ಗ್ರಾಮಗಳನ್ನು ಆವರಿಸಿ ಆ ಗ್ರಾಮಗಳ ಗಡಿಗಳಲ್ಲಿ ಹಾದು ಯೋಜನಾ ಪ್ರದೇಶವು ಪ್ರಾರಂಭವಾದ ಬಿಂದುವನ್ನು ಸೇರುತ್ತದೆ.

ಮೇಲೆ ವಿವರಿಸಿದ ಗಡಿ ಪ್ರದೇಶದ ಒಳಗೆ ಬರುವ ಎಲ್ಲಾ ಗ್ರಾಮಗಳು ಹಾಗೂ ಮೇಲೆ ವಿವರಿಸಿದ ಗಡಿಯ ರೇಖೆಯಲ್ಲಿ ಅಕಸ್ಮಾತ್ ಬಿಟ್ಟು ಹೋಗಿರಬಹುದಾದ ಗ್ರಾಮಗಳು ಸಹ ಸದರಿ ಸ್ಥಳೀಯ ಯೋಜನಾ ಪ್ರದೇಶದಲ್ಲಿ ಸೇರಿಸಿಕೊಳ್ಳುತ್ತವೆ.

---

( ಸಿದ್ದರಾಮಯ್ಯ )
ಸರ್ಕಾರದ ಅಧೀನ ಕಾರ್ಯದರ್ಶಿ,
ನಗರಾಭಿವೃದ್ಧಿ ಇಲಾಖೆ.